ಮುನ್ನೀ ದೂರ ಸರಿದು ಕಣ್ಣು ಕೆಕ್ಕರಿಸಿ ನೋಡುತ್ತ, 'ಹೂಂ ಮಾಡಿಬಿಡ್ತೀ ನೀನು ಬೇರೆ ಉಪಾಯ! ಅದೇನು ಉಪಾಯ ಮಾಡ್ತೀ ಅಂತ ಹೇಳು ಸ್ವಲ್ಪ ಕೇಳ್ತೀನಿ ನಾನೂ. ಯಾರಾದರೂ ಕಂಬಳೀನ ದಾನ ಕೊಟ್ಟುಬಿಡ್ತಾರೇನು? ಏನು ಮಾಡಿದರೂ ತೀರಿಸೋಕೆ ಆಗದೆ ಇರೋ ಹಣ ಅದೆಷ್ಟಿದೆಯೋ ಏನು ಕತೆಯೋ! ಈ ಹಾಳು ವ್ಯವಸಾಯ ನೀನು ಯಾಕೆ ಬಿಟ್ಟುಬಿಡಬಾರದು ಅಂತ ನಾನು ಹೇಳೋದು? ಆ ಕಡೆ ಜೀವ ತೇಯ್ಕೊಂಡು ಕೆಲಸ ಮಾಡ್ತಾ ಇರು. ಬೆಳೆ ಬಂತೂ ಅಂದರೆ ಸಾಕು ಬಾಕಿ ಉಳಿದಿರೋ ಸಾಲ ಎಲ್ಲ ಕೊಟ್ಟುಬಿಡು. ನಡೀ ರಜಾ ಮುಗೀತು. ಸಾಲ ತೀರಿಸೋದಕ್ಕೋಸ್ಕರಾನೆ ನಾವು ಹುಟ್ಟಿದ್ದೀವಿ. ಹೊಟ್ಟೆ ಪಾಡಿಗೆ ಕೂಲಿ ಕೆಲಸ ಮಾಡು. ಈ ಹಾಳು ಬೇಸಾಯಕ್ಕೆ ನಮಸ್ಕಾರ ಹೇಳೋಣ. ನಾನು ದುಡ್ಡು ಕೊಡಲ್ಲ ಅಂದರೆ ಕೊಡಲ್ಲ!' ಹಲ್ಕೂ ದುಃಖಿತನಾಗಿ ಹೇಳಿದ, 'ಹಾಗಾದರೆ ಅವನ ಕೈಲಿ ಬೈಸಿಕೊಳ್ಳಲೇನು?'

ಮುನ್ನೀ ವೇದನೆಯಿಂದ ಗಟ್ಟಿಯಾಗಿ, 'ಬೈಯೋದ್ಯಾಕೆ ಬೈತಾನೆ, ಅವನದೇನು ರಾಜ್ಯಭಾರ?'

ಆದರೆ, ಹೀಗೆ ಹೇಳುತ್ತಲೇ ಅವಳ ಬಿಗಿದ ಹುಬ್ಬುಗಳು ಸಡಿಲಗೊಂಡವು. ಹಲ್ಕೂನ ಮಾತಿನಲ್ಲಿ ಕಠೋರ ಸತ್ಯ ಇತ್ತು. ಅದು ಅವಳನ್ನು ಒಂದು ಭಯಂಕರ ಪ್ರಾಣಿಯಂತೆ ದುರುಗುಟ್ಟಿ ನೋಡುತ್ತಿತ್ತು.

ಒಳಕ್ಕೆ ಹೋಗಿ ಗೂಡಿನಲ್ಲಿಟ್ಟಿದ್ದ ಹಣ ತೆಗೆದುಕೊಂಡು ಬಂದು ಹಲ್ಕೂನ ಕೈಯಲ್ಲಿಟ್ಟು, 'ನೀನು ಈ ಸಲದಿಂದ ಈ ಹಾಳು ಬೇಸಾಯ ಬಿಟ್ಟುಬಿಡು. ಒಂದು ರೊಟ್ಟಿ ಅಂತೂ ಹೇಗೋ ಸುಖವಾಗಿ ತಿನ್ನಕ್ಕೆ ಸಿಕ್ಕುತ್ತೆ. ಯಾರದ್ದೂ ಬೆದರಿಕೆ, ದಬ್ಬಾಳಿಕೆ ಅಂತೂ ಇರಲ್ಲ. ಬಲು ಚೆನ್ನಾಗಿದೆ ಈ ಬೇಸಾಯ! ಕೂಲಿ ಮಾಡಿ ದುಡಿದುಕೊಂಡು ಬಾ, ಆಮೇಲೆ ಅದನ್ನೂ ಅವನ ಕೈಗೇ ತುರುಕಿಬಿಡು. ಅದರ ಮೇಲೆ ಬೆದರಿಕೆ ಬೇರೆ' ಎಂದಳು.

ಹಲ್ಕೂ ಹಣ ತೆಗೆದುಕೊಂಡು ತನ್ನ ಹೃದಯವನ್ನೇ ತೆಗೆದುಕೊಂಡು ಹೋಗುತ್ತಾ ಇದ್ದಾನೇನೋ ಎನ್ನುವ ಹಾಗೆ ಹೊರ ಹೊರಟ. ಅವನು ಕೂಲಿ ಮಾಡಿ ಒಂದೊಂದೇ ಪೈಸೆ ಸೇರಿಸಿ ಕಂಬಳಿ ಕೊಂಡುಕೊಳ್ಳಬೇಕೆಂದು ಮೂರು ರೂಪಾಯಿ ಕೂಡಿಸಿಟ್ಟಿದ್ದ. ಈ ಹೊತ್ತು ಆ ಮೂರು ರೂಪಾಯಿ ಹೊರಟುಹೋಗುತ್ತಾ ಇದೆ. ಒಂದೊಂದು ಹೆಜ್ಜೆಯೊಂದಿಗೂ ಬಡತನದ ಭಾರದಿಂದಾಗಿ ಅವನ ಹಣೆ ಹಳ್ಳ ಬೀಳುತ್ತಿದೆ.

ಪುಷ್ಯಮಾಸದ ಕಗ್ಗತ್ತಲೆಯ ರಾತ್ರಿ! ಆಗಸದಲ್ಲಿ ನಕ್ಷತ್ರಗಳು ಮುದುಡುತ್ತಿರುವಂತೆ ಕಾಣುತ್ತಿದ್ದವು. ಹಲ್ಕೂನ ಹೊಲದ ಬದುವಿನ ಮೇಲೆ ಕಬ್ಬಿನ ಒಂದು ಮಂಚಿಕೆ ಇತ್ತು. ಅದರ ಕೆಳಗೆ ಅವನು ಬಿದಿರಿನ ಹೊರಸಿನ (ಮಂಚದ) ಮೇಲೆ ಮಲಗಿದ್ದ. ತನ್ನ ಹಳೆಯ ದಪ್ಪ ಚಾದರವನ್ನು ಹೊದ್ದುಕೊಂಡು ಬಹಳ ಕೆಟ್ಟದಾಗಿ ನಡುಗುತ್ತಿದ್ದ. ಹೊರಸಿನ ಕೆಳಗೆ ಅವನ ಸಂಗಾತಿ ನಾಯಿ ಜಬರಾ ಹೊಟ್ಟೆಯಲ್ಲಿ ಮುಖ ಹುದುಗಿಸಿಕೊಂಡು ಚಳಿಯಿಂದಾಗಿ ಕುಂಯ್ ಕುಂಯ್ ಎಂದು ದನಿಮಾಡುತ್ತಿತ್ತು. ಇಬ್ಬರಲ್ಲಿ ಯಾರೊಬ್ಬರಿಗೂ ನಿದ್ದೆ ಹತ್ತುತ್ತಿರಲಿಲ್ಲ.

ಹಲ್ಕೂ ಮೊಳಕಾಲುಗಳನ್ನು ಕುತ್ತಿಗೆಯಲ್ಲಿ ಹುದುಗಿಸಿಕೊಳ್ಳುತ್ತ ಹೇಳಿದ, 'ಯಾಕೋ ಜಬರಾ ಚಳಿಯಾಗ್ತಾ ಇದೆಯೇನೋ? ಮನೇಲಿರೋ ಒಣ ಹುಲ್ಲಿನ ಮೇಲೆ ಬಿದ್ದುಗೊಂಡಿರು ಅಂತ ಹೇಳ್ತಾ ಇರಲಿಲ್ಲವೇನು ನಾನು? ಹಾಗೆ ಹೇಳಿದ ಮೇಲೂ ಇಲ್ಲಿ ಏನು ಸಿಕ್ಕುತ್ತೆ ಅಂತ ಬಂದೆ? ಈಗ ಈ ಥಂಡಿ ತಿನ್ನು, ನಾನೇನು ಮಾಡಲಿ? ನಾನು ಹಲ್ವಾ ಪೂರಿ ತಿನ್ನಕ್ಕೆ ಇಲ್ಲಿಗೆ ಹೋಗ್ತಾ ಇದ್ದೀನಿ ಅಂತ ಅಂದುಕೊಂಡಿದ್ದೆ ಅಲ್ಲವಾ? ಅದಕ್ಕೇ ನನಗಿಂತ ಮುಂಚೆ ಓಡೋಡಿ ಬಂದೆ. ಈಗ ತಡೆದುಕೊಳ್ಳಕ್ಕಾಗದೆ ಇರೋದಕ್ಕೆ ಕಣ್ಣೀರು ಸುರಿಸು."

ಜಬರಾ ಬಿದ್ದುಕೊಂಡೇ ಬಾಲ ಅಲ್ಲಾಡಿಸಿತು. ಅದರ ಜೊತೇಲೇ ಕುಂಯ್ ಕುಂಯ್ ಅನ್ನು ಇನ್ನಷ್ಟು ಉದ್ದ ಮಾಡುತ್ತಾ ಒಂದು ಸಲ ಆಕಳಿಸಿ ಸುಮ್ಮನಾಯಿತು. ಅದರ ಶ್ವಾನಬುದ್ಧಿಗೆ ತನ್ನ ಕುಂಯ್ ಕುಂಯ್ ನಿಂದಲೇ ಯಜಮಾನನಿಗೆ ನಿದ್ದೆ ಬರ್ತಾಇಲ್ಲ ಅಂತ ತೋಚಿತು.

ಹಲ್ಕೂ ಕೈ ಹೊರತೆಗೆದು ಜಬರಾನ ಕೊರೆಯುವ ಬೆನ್ನನ್ನು ಸವರುತ್ತ, 'ನಾಳೆಯಿಂದ ನನ್ನ ಜೊತೆ ನೀನು ಬರಕೂಡದು. ಹಾಗಲ್ಲದೆ ಬಂದರೆ ಈ ಥಂಡೀಲಿ ಸೆಡೆತುಕೊಂಡುಬಿಡುತ್ತೀಯಾ. ಈ ಮುಂಡೇದು ಪಶ್ಚಿಮ ದಿಕ್ಕು ಅದೆಲ್ಲಿಂದ ಹಿಮ ತರುತ್ತಾ ಇದೆಯೋ ಏನೋ. ಎದ್ದು ಒಂದು ಚಿಲುಮಾನಾದರೂ ತುಂಬುತ್ತೀನಿ. ಹ್ಯಾಗೋ ಒಂದು ರಾತ್ರಿ ಕಳೀಬೇಕಲ್ಲ.